ನೆಲಮಂಗಲ ತಾಲ್ಲೂಕು ಮಣ್ಣೆ-ಬರಗೂರು ರಸ್ತೆ ದುರಸ್ತಿ.

307 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) *ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲು ಹೋಬಳಿ ಮಣ್ಣೆ-ಬರಗೂರು ರಸ್ತೆಯು ಬಸ್ಸು ಸಂಚಾರಕ್ಕೆ ಮತ್ತು ಸಾರ್ವಜನಿಕರು ಓಡಾಡಲು ಕಳೆದ 5-6 ವರ್ಷಗಳಿಂದ ಯೋಗ್ಯಕರವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಸದರಿ ರಸ್ತೆಯನ್ನು ದುರಸ್ತಿ ಪಡಿಸಲು ಸರ್ಕಾರ ತೆಗೆದು ಕೊಂಡು ಕ್ರಮಗಳೇನು;*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು): ಅ) ಸದರಿ ರಸ್ತೆಯನ್ನು ಕಳೆದ ಸಾಲಿನಲ್ಲಿ ಮುಖ್ಯ ಜಿಲ್ಲಾ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಿಂದ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ತೆಗೆದುಕೊಂಡಿದ್ದು ನಾದರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) 1993-94ರ ಸಾಲಿನಲ್ಲಿ ಈ ರಸ್ತೆಯ 8.0 ಕಿಮೀ. ಉದ್ದದಲ್ಲಿ 3.0 ಕಿಮೀ. ಉದ್ದಕ್ಕೆ ಮರು ಜಲ್ಲಿ ಹಾಕುವ ಕಾರ್ಯಕ್ರಮವಿದೆ. ಅನುದಾನದ ಲಭ್ಯತೆಯನ್ನು ಅನುಸರಿಸಿ ಈ ರಸ್ತೆಯನ್ನು ಸುಸ್ಥಿತಿಯಲ್ಲಿಡಲು ವಾರ್ಷಿಕ ನಿರ್ವಹಣಾ ಅನುದಾನದಲ್ಲಿ ಕ್ರಮ ಕೈಗೊಳ್ಳಲಾಗಿದೆ ಹಾಗೂ ಹಂತ ಹಂತವಾಗಿ ಈ ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗುವುದು.

ಮಲೆನಾಡು ಅಭಿವೃದ್ಧಿ ಮಂಡಳಿಯ ಕಾಮಗಾರಿಗಳ ಕುರಿತು

327 - ಶ್ರೀ ಪಿ.ಬಸವರಾಜ್ (ಬ್ರಹ್ಮಾವರ): ಮಾನ್ಯ ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1993-94ನೇ ಸಾಲಿಗೆ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಬ್ರಹ್ಮಾವರ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಯ ಯಾವ ಯಾವ ಕಾಮಗಾರಿಗಳಿಗೆ ಈಗಾಗಲೇ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ?*

ಆ) *ದಕ್ಷಿಣ ಕನ್ನಡ ಜಿಲ್ಲೆಯ ಬೇರೆ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಯಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿ ಕಾಮಗಾರಿಗಳು ಈಗಾಗಲೇ ಪ್ರಾರಂಭವಾಗಿದ್ದು ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ ಯಾವುದೇ ಕಾಮಗಾರಿಗಳು ಆರಂಭವಾಗಿಲ್ಲದಿರುವುದಕ್ಕೆ ಕಾರಣಗಳೇನು?*

ಇ) *ಇನ್ನು 3 ತಿಂಗಳ ನಂತರ ಮಳೆಗಾಲ ಆರಂಭವಾಗುವುದರಿಂದ ಮಲೆನಾಡು ಅಭಿವೃದ್ಧಿ ಮಂಡಳಿಯ ಸದರಿ ಸಾಲಿನ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಲಾಗುವುದೇ?*

ಶ್ರೀ ಎನ್.ಜಿ. ಹಾಲಪ್ಪ (ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು): ಅ) ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಆ) ಮಂಡಳಿಯು ಬ್ರಹ್ಮಾವರ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾತಿ ನೀಡಿದ 11 ಕಾಮಗಾರಿಗಳಲ್ಲಿ 9 ಕಾಮಗಾರಿಗಳಿಗೆ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್ ಉಡುಪಿ ಇವರು ಟೆಂಡರ್ ಕರೆದು ಗುತ್ತಿಗೆದಾರರನ್ನು ನಿಗದಿಪಡಿಸಿರುತ್ತಾರೆ. ಇವುಗಳಲ್ಲಿ 6 ಕಾಮಗಾರಿಗಳು ಪ್ರಾರಂಭವಾಗಿದ್ದು, ಉಳಿದ 3 ಕಾಮಗಾರಿಗಳನ್ನು ಸದ್ಯದಲ್ಲೇ

ಪ್ರಾರಂಭಿಸಲಾಗುವುದು. ಆಡಳಿತಾತ್ಮಕ ಮಂಜೂರಾತಿ ನೀಡಿದ 11 ಕಾಮಗಾರಿಗಳಲ್ಲಿ ಬಾಕಿ ಉಳಿದ 2 ಕಾಮಗಾರಿಗಳಿಗೆ ಟೆಂಡರ್ ಕರೆದು ಗುತ್ತಿಗೆದಾರರನ್ನು ನಿಗದಿಪಡಿಸ ಬೇಕಾಗಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ

ಮಲೆನಾಡು ಅಭಿವೃದ್ಧಿ ಮಂಡಳಿಯಡಿಯಲ್ಲಿ ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ ಮಂಜೂರಾದ ಕಾಮಗಾರಿಗಳ ವಿವರ

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಕೆಲಸದ ಹೆಸರು	ಅಂದಾಜು ಮೊತ್ತ
1.	ಕೊಕ್ಕರ್ಣೆ ಮಿಯಾರು ರಸ್ತೆ ವಿಶೇಷ ದುರಸ್ತಿ (ಕಿ.ಮಿ. 2 ರಿಂದ 7)	2.00
2.	ಪರ್ಡೂರು ಮುನಿಯಾಲು ರಸ್ತೆಯ 1.30 ರಿಂದ 1.65 ಕಿ.ಮಿ. ವರೆಗೆ ಡಾಂಬರು	1.05
3.	ಬಜಪೆರ್ಡೂರು (ಪೆರ್ಡೂರು ಬಜೆ) ರಸ್ತೆಯ 0-2.10 ಕಿ.ಮಿ. 5.63-4.63 ಕಿ.ಮಿ. ವರೆಗೆ ಡಾಂಬರು	2.00
4.	ಉಡುಪಿ ತಾ. ಹಾವೆಂಜೆ ಮಂ. ಹಾವೆಂಜೆಬೆಳ್ಕಂಪಳ್ಳಿ ರಸ್ತೆಗೆ ಡಾಂಬರು 0 ದಿಂದ 658 ಕಿ.ಮಿ.	1.50
5.	ಉಡುಪಿ ತಾ. ಹಾವೆಂಜೆ ಮಂ. ಕುಕ್ಕೆಪಳ್ಳಿ ಮಡಿವೇತ್ರಿ 0 ರಿಂದ 1.00 ಕಿ.ಮಿ. ವರೆಗೆ	2.00
6.	ಉಡುಪಿ ಬ್ರಹ್ಮಾವರ ಮಂ. ಚಾಂತಾರು ಅಂಗಡಿವೆಟ್ಟು ರಸ್ತೆ ಅಭಿವೃದ್ಧಿ 0 ರಿಂದ 1.00 ಕಿ.ಮಿ. ವರೆಗೆ	2.00
7.	" ಕೊರ್ಕಣೆ ಮಂ. ನಾಲ್ಕೂರು ಸಂಚಾರು ರಸ್ತೆಗೆ 0 ರಿಂದ 0.50 ಕಿ.ಮಿ. 5.80-6.30ವರೆಗೆ ಹಾಮರು ಮತ್ತು 1 ರಿಂದ 5.00 ಕಿ.ಮಿ. ವರೆಗೆ ದುರಸ್ತಿ	2.00
8.	" ಸಾಬರಕಟ್ಟೆ ಮಂ. ಅಲ್ತಾರು ಮಂದರ್ತಿ ರಸ್ತೆ ಅಭಿವೃದ್ಧಿ	2.00
9.	ಉಡುಪಿ ತಾ. ಬ್ರಹ್ಮಾವರ ಮಂ. ನಂಜಾರು ಗ್ರಾಮದ ಅಮ್ರಕಲ್ಲು ಹೆಸ್ಕುಂದಲು ಎಂಬಲ್ಲಿ ಕಿರು ಸೇತುವೆ ರಚನೆ.	2.00
10.	ಶಿರೂರು ಕೊಕ್ಕರ್ಣೆ-ಸಂತೆಕಟ್ಟೆ ರಸ್ತೆ ಕಿ.ಮಿ.16ರಲ್ಲಿ ಬಲ್ಲಿಬೈಲು ಹಳ್ಳಕ್ಕೆ ಸೇತುವೆ ಮರು ರಚನೆ	5.95
11.	ಮಂಕಿನಜಿಡ್ಡು-ಬಿನಗಲ್-ಕೊಕ್ಕರ್ಣೆ ರಸ್ತೆ ಅಭಿವೃದ್ಧಿ ಕಿ.ಮಿ. 1.20 ರಿಂದ 2.50ರ ವರೆಗೆ.	3.50
		26.00

ಹಿರೇಕೆರೂರು ತಾಲ್ಲೂಕು ನೇತ್ರೆ ಕೆರೆಯಿಂದ ಮಾವಿನ ತೋಪು ಕೆಳಗೆ ಫೀಡರ್ ಛಾನಲ್

288 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹಿರೇಕೆರೂರು ತಾಲ್ಲೂಕು ನೆತ್ತಿ ಕೆರೆಯಿಂದ ಮಾವಿನ ತೋಪ್ ಕೆರೆಗೆ ಫೀಡರ್ಚಾನಲ್ ನಿರ್ಮಾಣ ಮಾಡಲು ನಕ್ಷೆ ಹಾಗೂ ಅಂದಾಜುಪಟ್ಟಿ ತಯಾರಿಸಲಾಗಿದೆಯೇ ಮತ್ತು ಅದಕ್ಕೆ ಮಂಜೂರಾತಿ ದೊರೆತಿದೆಯೇ: